# ಕರ್ನಾಟಕ ವಿಧಾನ ಪರಿಷತ್

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 791 |
| **ಸದಸ್ಯರ ಹೆಸರು** | ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | 25.9.2020 |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ಬೆಂಗಳೂರು ನಗರದ ತುಮಕೂರು ರಸ್ತೆ ಮಾದನಾಯಕಹಳ್ಳಿ ಗ್ರಾಮದಿಂದ ಕುದುರೆಗೆರೆ ಸಾಸವೆಗಟ್ಟು ಕುಂಬಾರಹಳ್ಳಿ ಮುಖಾಂತರ ಹಾದು ಹೋಗಿ ಹೆಸರಘಟ್ಟ ಸಂಪರ್ಕ ಕಲ್ಪಿಸುವ ರಸ್ತೆಯು ಮತ್ತು ಬೆಂಗಳೂರು ನಗರದ ಕಡಬಗೆರೆ ಗ್ರಾಮದಿಂದ ಲಕ್ಷಿಪುರ ಚಿನ್ನಮಂಡಲ ವಡ್ಡರಹಳ್ಳಿ ಮುಖಾಂತರ ಹಾದುಹೋಗಿ ಮಾದನಾಯಕಹಳ್ಳಿ ತುಮಕುರು ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತಯು ಹಾಳಾಗಿ ಸಾರ್ವಜನಿಕ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗ್ರಾಮೀಣ ಭಾಗದ ಕೆಲವು ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ. | ಬಂದಿದ್ದಲ್ಲಿ, ಸದರಿ ರಸ್ತೆಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಕಳೆದ 10 ವರ್ಷಗಳಲ್ಲಿ ಡಾಂಬರೀಕರಣ/ಕಾಂಕ್ರೀಟ್‌ಕರಣ ಮಾಡಿದ ಕಾಮಗಾರಿಗಳ ಸಂಪೂರ್ಣ ಮಾಹಿತಿ ನೀಡುವುದು; | **ಲೋಕೋಪಯೋಗಿ ಇಲಾಖೆ:**<br>ಕಳೆದ 10 ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಡಾಂಬರೀಕರಣ/ ಕಾಂಕ್ರೀಟ್‌ಕರಣ ಮಾಡಿದ ರಸ್ತೆ ಕಾಮಗಾರಿಗಳ ಸಂಪೂರ್ಣ ವಿವರ ಅನುಬಂಧ-2 ರಲ್ಲಿ ಲಗತ್ತಿಸಿದೆ.<br><br>ಅ. ತುಮಕೂರು ರಸ್ತೆ ಮಾದನಾಯಕನಹಳ್ಳಿ ಗ್ರಾಮದಿಂದ ಕುದುರೆಗೆರೆವರೆಗಿನ ಸರಪಳಿಯು ಲೋಕೋಪಯೋಗಿ ಇಲಾಖೆಯ ಬೆಂಗಳೂರು ಉಪವಿಭಾಗ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಮುಖ್ಯ ರಸ್ತೆಯಾದ ಹೆಸರುಘಟ್ಟ ಟ್ಯಾಂಕ್‌ಬಂಡ್ ರಸ್ತೆಯಿಂದ ಸಿದ್ದನಹಳ್ಳಿ, ಮಾದನಾಯನಕನಹಳ್ಳಿ, ಲಕ್ಷ್ಮೀಪುರ ಮಾರ್ಗ ಬಿ.ಎಂ.ಹೆಚ್ ರಸ್ತೆ ಸೇರುವ ರಸ್ತೆಯಾಗಿದ್ದು ಕುದುರೆಗೆರೆಯಿಂದ ಮಾದನಾಯಕನಹಳ್ಳಿ ಗ್ರಾಮದ ಹತ್ತಿರ ತುಮಕೂರು ರಸ್ತೆಗೆ ಸೇರುವ ರಸ್ತೆಯ ಸರಪಳಿ ಕಿ.ಮೀ 4.25 ರಿಂದ 6.05 ಆಗಿದ್ದು, ಒಟ್ಟು 1800 ಮೀಟರ್‌ಗಳ ಉದ್ದವಿದ್ದು ರಸ್ತೆಯು ಸುಸ್ಥಿತಿಯಲ್ಲಿರುತ್ತದೆ.<br>ಆ. ಬೆಂಗಳೂರು ನಗರದ ಕಡಬಗೆರೆ ಗ್ರಾಮದಿಂದ ಲಕ್ಷ್ಮೀಪುರ, ಚಿನ್ನಮಂಗಲ, ವಡ್ಡರಹಳ್ಳಿ ಮುಖಾಂತರ ಹಾದುಹೋಗಿ ಮಾದನಾಯಕನಹಳ್ಳಿ- ತುಮಕೂರು ರಸ್ತೆ ಸದರಿ ರಸ್ತೆಯು ಲೋಕೋಪಯೋಗಿ ಇಲಾಖೆಯ |

| | | |
|---|---|---|
| | | ಬೆಂಗಳೂರು ಉಪವಿಭಾಗ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಮುಖ್ಯ ರಸ್ತೆಯಾದ ಹೆಸರುಘಟ್ಟ ಟ್ಯಾಂಕ್‌ಬಂಡ್ ರಸ್ತೆಯಿಂದ ಸಿದ್ದನಹಳ್ಳಿ, ಮಾದನಾಯನಕನಹಳ್ಳಿ, ಲಕ್ಷ್ಮೀಪುರ ಮಾರ್ಗ ಬಿ.ಎಂ.ಹೆಚ್ ರಸ್ತೆ ಸೇರುವ ರಸ್ತೆಯಾಗಿದ್ದು, ಕಡಬಗೆರೆ ಗ್ರಾಮದಿಂದ ಲಕ್ಷ್ಮೀಪುರ, ಚಿನ್ನಮಂಗಲ, ವಡ್ಡರಹಳ್ಳಿ ಮುಖಾಂತರ ಹಾದುಹೋಗಿ ಮಾದನಾಯಕನಹಳ್ಳಿ-ತುಮಕೂರು ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯು ಮೇಲ್ಕಂಡ ಜಿಲ್ಲಾ ಮುಖ್ಯರಸ್ತೆಯ ಸರಪಳಿ 9.00 ಕಿಮೀಯಿಂದ 20.20 ಕಿಮೀವರೆಗಿನ ಸರಪಳಿಯಾಗಿದ್ದು, ಸದರಿ ರಸ್ತೆಯನ್ನು ಸುಸ್ಥಿತಿಯಲ್ಲಿಡಲು 2020-21ನೇ ಸಾಲಿನ ವಾರ್ಷಿಕ ನಿರ್ವಹಣೆಯಡಿಯಲ್ಲಿ ಗುಂಡಿಮುಚ್ಚುವ ಕಾಮಗಾರಿಯನ್ನು ಕೈಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:**<br>ಕಳೆದ 10 ವರ್ಷಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಡಾಂಬರೀಕರಣ/ ಕಾಂಕ್ರೀಟ್‌ಕರಣ ಮಾಡಿದ ರಸ್ತೆ ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಇ. | ಸದರಿ ರಸ್ತೆಗಳನ್ನು ಸುಸ್ಥಿಗೆ ತರಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | **ಲೋಕೋಪಯೋಗಿ ಇಲಾಖೆ:**<br>ಸದರಿ ರಸ್ತೆ ಕಾಮಗಾರಿಗಳನ್ನು 2015-16ನೇ ಸಾಲಿನಲ್ಲಿ ರೂ. 139.09 ಲಕ್ಷಗಳ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೊಂಡಿದ್ದು, 2019-20 ನೇ ಸಾಲಿನಲ್ಲಿ ಮರು ಡಾಂಬರೀಕರಣ ಮಾಡಲಾಗಿದ್ದು, ರಸ್ತೆಗಳು ಸುಸ್ಥಿತಿಯಲ್ಲಿರುತ್ತದೆ.<br><br>**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:**<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ರಸ್ತೆಗಳ ಸುಸ್ಥಿಗೆ ತೆಗೆದುಕೊಂಡ ಕ್ರಮಗಳನ್ನು ಅನುಬಂಧ-1ರಲ್ಲಿ ನೀಡಿದೆ. ಹಾಗೂ<br><br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯ ಅನುಬಂಧ-1ರ ಕ್ರ. ಸಂ: 2, 3 & 4ರ ಒಟ್ಟು 3 ರಸ್ತೆಗಳನ್ನು ಅನುದಾನದ ಲಭ್ಯತೆಯನ್ನಧರಿಸಿ ಸಾಮಾನ್ಯ ದುರಸ್ಥಿಯನ್ನು ಕೈಗೊಳ್ಳಬೇಕಿದೆ. |

ಕಡತ ಸಂಖ್ಯೆ: ಗ್ರಾಅಪ:ಅಧಿ07/41/ಆರ್‌ಆರ್‌ಸಿ:2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

**ಕೆ.ಎಸ್. ಈಶ್ವರಪ್ಪ**
**ಗ್ರಾಮೀಣಾಭಿವೃದ್ಧಿ ಮತ್ತು**
**ಪಂಚಾಯತ್ ರಾಜ್ ಸಚಿವರು**

# ಅನುಬಂಧ–1

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:685 (791) ಉತ್ತರಿಸುವ ಕುರಿತು.

| ಕ್ರಸಂ | ರಸ್ತೆಯ ಹೆಸರು | ರಸ್ತೆಯ ಉದ್ದ | ಷರಾ |
|---|---|---|---|
| 1 | ಬೆಂಗಳೂರು ನಗರ, ತುಮಕೂರು ರಸ್ತೆ, ಮಾದನಾಯಕನಹಳ್ಳಿ ಗ್ರಾಮದಿಂದ ಕುದುರೆಗೆರೆ ಹೋಗುವ ರಸ್ತೆ | 2.20 ಕಿ.ಮೀ | ಲೋಕೋಪಯೋಗಿ ಇಲಾಖೆಗೆ ಸೇರಿರುತ್ತದೆ. |
| 2 | ಕುದುರೆಗೆರೆಯಿಂದ ಸಾಸುವೆಘಟ್ಟ ಗ್ರಾಮಕ್ಕೆ ಸೇರುವ ರಸ್ತೆ | 2.00 ಕಿ.ಮೀ | ಕಾಂಕ್ರೀಟ್ ರಸ್ತೆ 600.00 ಮೀಟರ್ ಗಳನ್ನು 2016-17 ರಲ್ಲಿ ಕೆ.ಎಲ್.ಎಲ್.ಎ.ಡಿ. ಅಡಿಯಲ್ಲಿ ಕೈಗೊಳ್ಳಲಾಗಿರುತ್ತದೆ.ಹಾಗೂ ಉಳಿದ ಭಾಗವನ್ನು ಲೋಕೋಪಯೋಗಿ ಇಲಾಖೆಯಿಂದ ಒಂದು ಬಾರಿ ಅಭಿವೃದ್ಧಿಯಡಿಯಲ್ಲಿ 2019 ರಲ್ಲಿ ಕೈಗೊಳ್ಳಲಾಗಿರುತ್ತದೆ. |
| 3 | ಸಾಸುವೆಘಟ್ಟ ಗ್ರಾಮದಿಂದ ಹೆಸರಘಟ್ಟ ಮುಖ್ಯ ರಸ್ತೆ | 1.00 ಕಿ.ಮೀ | ಕಾಂಕ್ರೀಟ್ ರಸ್ತೆ 800.00 ಮೀಟರ್ ಗಳನ್ನು 2015-16 ರಲ್ಲಿ ಎಂ.ಪಿ.ಎಲ್.ಎಲ್.ಎ.ಡಿ. ಅಡಿಯಲ್ಲಿ ಕೈಗೊಳ್ಳಲಾಗಿರುತ್ತದೆ. |
| 4 | ಹೆಸರಘಟ್ಟ ಮುಖ್ಯ ರಸ್ತೆಯಿಂದ ಕುಂಬಾರಹಳ್ಳಿ ಗ್ರಾಮದ ರಸ್ತೆ | 1.20 ಕಿ.ಮೀ | ಲೋಕೋಪಯೋಗಿ ಇಲಾಖೆಯಿಂದ ಒಂದು ಬಾರಿ ಅಭಿವೃದ್ಧಿಯಡಿಯಲ್ಲಿ 2019 ರಲ್ಲಿ ಡಾಂಬರೀಕರಣಗೊಳಿಸಲಾಗಿರುತ್ತದೆ. ಕೈಗೊಳ್ಳಲಾಗಿರುತ್ತದೆ. |
| 5 | ಬೆಂಗಳೂರು ನಗರ, ಕಡಬಗೆರೆ ಗ್ರಾಮದಿಂದ ಲಕ್ಷ್ಮೀಪುರ, ಚಿನ್ನಮಂಗಲ, ವಡ್ಡರಹಳ್ಳಿ ಮುಖಾಂತರ ಮಾದನಾಯಕನಹಳ್ಳಿ-ತುಮಕೂರು ರಸ್ತೆಗೆ ಸಂಪರ್ಕ ರಸ್ತೆ | 9.50 ಕಿ.ಮೀ | ಲೋಕೋಪಯೋಗಿ ಇಲಾಖೆಗೆ ಸೇರಿದ್ದು ರಾಜ್ಯ ಹೆದ್ದಾರಿ ಆಗಿರುತ್ತದೆ. |

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯ ಅನುಬಂಧ-1ರ ಕ್ರ. ಸಂ: 2,3 & 4ರ ಒಟ್ಟು 3 ರಸ್ತೆಗಳನ್ನು ಅನುದಾನದ ಲಭ್ಯತೆಯನ್ನಾಧರಿಸಿ ಸಾಮಾನ್ಯ ದುರಸ್ಥಿಯನ್ನು ಕೈಗೊಳ್ಳಬೇಕಿದೆ.**

# ಅನುಬಂಧ-2

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:685 (791) ಉತ್ತರಿಸುವ ಕುರಿತು.

| ಕ್ರ ಸಂ | ಲೋಕೋಪಯೋಗಿ ಇಲಾಖೆಯ ರಸ್ತೆಗಳ ವಿವರ |
|---|---|
| 1 | ಹೆಸರುಘಟ್ಟ ಬ್ಯಾಂಕ್‌ಬಂಡ್ ರಸ್ತೆಯಿಂದ ಸಿದ್ದನಹಳ್ಳಿ, ಮಾದನಾಯನಕನಹಳ್ಳಿ, ಲಕ್ಷ್ಮೀಪುರ ಮಾರ್ಗ ಬಿ.ಎಂ.ಹೆಚ್ ರಸ್ತೆ ಸೇರುವ ರಸ್ತೆಯಾಗಿದ್ದು ಕುದುರೆಗೆರೆಯಿಂದ ಮಾದನಾಯಕನಹಳ್ಳಿ ಗ್ರಾಮದ ಹತ್ತಿರ ತುಮಕೂರು ರಸ್ತೆಗೆ ಸೇರುವ ರಸ್ತೆಯ ಸರಪಳಿಯು ಕಿ.ಮೀ 4.25 ರಿಂದ 6.05 ಆಗಿದ್ದು, ಒಟ್ಟು 1800 ಮೀಟರ್‌ಗಳ ಉದ್ದವಿದ್ದು ಈ ಸರಪಳಿಯನ್ನು 2015-16ನೇ ಸಾಲಿನಲ್ಲಿ ರೂ. 139.09 ಲಕ್ಷಗಳ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. |
| 2 | ಕುದುರೆಗೆರೆ ಸಾಸವೆಘಟ್ಟ, ಕುಂಬಾರಹಳ್ಳಿ ಮುಖಾಂತರ ಹಾದು ಹೆಸರುಘಟ್ಟ ಸಂಪರ್ಕ ಕಲ್ಪಿಸುವ ರಸ್ತೆಯು ಹಳ್ಳಿ ರಸ್ತೆಯಾಗಿದ್ದು, ಈ ರಸ್ತೆಯು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಈ ರಸ್ತೆಯಲ್ಲಿ ಸಾಸವೆಘಟ್ಟದ ಹತ್ತಿರ 614 ಮೀಟರ್ ಉದ್ದದ ರಸ್ತೆಯನ್ನು ರೂ. 68.32 ಲಕ್ಷದ ವೆಚ್ಚದಲ್ಲಿ ಮತ್ತು ಕುಂಬಾರಹಳ್ಳಿ ಹತ್ತಿರ 955 ಮೀಟರ್ ಉದ್ದದ ರಸ್ತೆಯನ್ನು ರೂ. 78.60 ಲಕ್ಷ ವೆಚ್ಚದಲ್ಲಿ ಒಂದು ಬಾರಿ ಅಭಿವೃದ್ಧಿಪಡಿಸುವ ಯೋಜನೆಯಡಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ 2019-20ನೇ ಸಾಲಿನಲ್ಲಿ ಡಾಂಬರೀಕರಣ ಕಾಮಗಾರಿಯನ್ನು ಮಾಡಲಾಗಿರುತ್ತದೆ. |
| 3 | ಹೆಸರುಘಟ್ಟ ಬ್ಯಾಂಕ್‌ಬಂಡ್ ರಸ್ತೆಯಿಂದ ಸಿದ್ದನಹಳ್ಳಿ, ಮಾದನಾಯನಕನಹಳ್ಳಿ, ಲಕ್ಷ್ಮೀಪುರ ಮಾರ್ಗ ಬಿ.ಎಂ.ಹೆಚ್ ರಸ್ತೆ ಸೇರುವ ರಸ್ತೆಯಾಗಿದ್ದು, ಕಡಬಗೆರೆ ಗ್ರಾಮದಿಂದ ಲಕ್ಷ್ಮೀಪುರ, ಚಿನ್ನಮಂಗಲ, ವಡ್ಡರಹಳ್ಳಿ ಮುಖಾಂತರ ಹಾದುಹೋಗಿ ಮಾದನಾಯಕನಹಳ್ಳಿ- ತುಮಕೂರು ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ಸರಪಳಿ 9.00 ಕಿಮೀಯಿಂದ 20.20 ಕಿಮೀವರೆಗಿನ ಸರಪಳಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಲು 2013-14 ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 2014-15 ಮತ್ತು 2015-16 ನೇ ಸಾಲಿನಲ್ಲಿ ಈ ರಸ್ತೆಯ ಅಭಿವೃದ್ಧಿಯೊಂದಿಗೆ ಡಾಂಬರೀಕರಣ ಮಾಡಿರುತ್ತದೆ. ಮುಂದುವರೆದು, 2019-20 ನೇ ಸಾಲಿನಲ್ಲಿ ಈ ರಸ್ತೆಯ ಸರಪಳಿ 13.50 ರಿಂದ 14.60 ಕಿಮೀವರೆಗೆ 1100 ಮೀಟರ್ ಉದ್ದದ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯ ಯಿಂದ ರೂ. 66.39 ಲಕ್ಷಗಳ ವೆಚ್ಚದಲ್ಲಿ ಮರುಡಾಂಬರೀಕರಣ ಕಾಮಗಾರಿಯನ್ನು ಮಾಡಲಾಗಿರುತ್ತದೆ |